**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಕನಕಪುರ.**

CC No.632/2008

CW -3 PW -1

| | | |
|---|---|---|
| ಹೆಸರು | ಃ | ಬಲರಾಮ ನಾಯ್ಕ |
| ತಂದೆಯ ಹೆಸರು | ಃ | ಸೋಮ್ಲ ನಾಯ್ಕ |
| ವಯಸ್ಸು | ಃ | 47 ವರ್ಷ |
| ಉದ್ಯೋಗ | ಃ | ಪೈಂಟ್ ಕೆಲಸ |
| ವಾಸ | ಃ | ಚೌಕಸಂದ್ರ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ <u>ದಿನಾಂಕ 01.07.2024</u>

ನ್ಯಾಯಾಲಯ ಮುಂದಿರುವ ಆರೋಪಿತ ಗೊತ್ತು. ಚಾಸಾ-2 ಗೊತ್ತು. ಚಾಸಾ-1, 4 ರಿಂದ 8 ಗೊತ್ತಿಲ್ಲ.

ಕನಕಪುರ ಗ್ರಾಮಾಂತರ ಪೋಲಿಸ ಅಧಿಕಾರಿಗಳು ನಾನು ಮತ್ತು ಚಾಸಾ-2 ರವರು ಪೋಲಿಸ್ ಠಾಣೆಗೆ ಹೋಗಿದ್ದಾಗ ಚೌಕಸಂದ್ರ ಗ್ರಾಮದ ಪುಟ್ಟನಾಯ್ಕ ರವರ ಮಗ ಸೀನಾ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವ ಬಗ್ಗೆ ತಿಳಿಸಿ, ಆತನನ್ನು ಮತ್ತು ಮದ್ಯವನ್ನು ಅಲ್ಲಿ ಹಾಜರುಪಡಿಸಿದ ಮೇರೆಗೆ ನಮ್ಮನ್ನು ಪಂಚರಾಗಿ ಸಹಕರಿಸಬೇಕೆಂದು ಹೇಳಿರುವುದಿಲ್ಲ.

ನಂತರ ನಮ್ಮ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಮದ್ಯವನ್ನು ಅಮಾನತ್ತು ಪಡಿಸಿಕೊಂಡು ನನ್ನ ಸಹಿಯನ್ನು

ಪಡೆದಿರುವುದಿಲ್ಲ. ಈ ಸಂಬಂಧ ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಈಗ ತೋರಿಸುತ್ತಿರುವ ಮಹಜರ್ ಅನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ-1 ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

<u>ಪಾಟೀ ಸವಾಲು ಃ ಎಪಿಪಿ ಯವರಿಂದ ಃ</u>

ದಿನಾಂಕಃ 19.07.2007 ರಂದು ನಾನು ಮತ್ತು ಚಾಸಾ-2 ರವರು ಸ್ವಂತ ಕೆಲಸದ ನಿಮಿತ್ತ ಕನಕಪುರ ಗ್ರಾಮಾಂತರ ಪೋಲಿಸ್ ಠಾಣೆಗೆ ಹೋಗಿದ್ದಾಗ, ಚಾಸಾ-4 ರವರು ಸಹ ಬಂದಿದ್ದರು ಎಂದರೆ ಸರಿಯಲ್ಲ. ಠಾಣೆಯಲ್ಲಿದ್ದ ಅಧಿಕಾರಿಗಳು ಚಾಸಾ-1 ರವರು ಸಿಬ್ಬಂದಿಯೊಂದಿಗೆ ಚೌಕಸಂದ್ರ ಗ್ರಾಮಕ್ಕೆ ಗಸ್ತಿಗೆ ಹೋಗಿದ್ದಾಗ ಅದೇ ಗ್ರಾಮದ ವಾಸಿಯಾದ ಆರೋಪಿಯವರು ತಮ್ಮ ಗುಡಿಸಲು ಹಿಂಭಾಗದ ಹಿತ್ತಲಿನಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದು, ಆ ಬಗ್ಗೆ ವಿಷಯ ತಿಳಿಸಿದರು ಎಂದರೆ ಸರಿಯಲ್ಲ. ಸದರಿಯವರು ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದು, 51 ಸಾರಾಯಿ ಪ್ಯಾಕೆಟ್ ಗಳನ್ನು ಪ್ಲಾಸ್ಟಿಕ್ ಡಬ್ಬದ ಸಮೇತ ಆರೋಪಿಯೊಂದಿಗೆ ಹಾಜರುಪಡಿಸಿದ್ದು, ಈತನೇ ಆ ವ್ಯಕ್ತಿ ಎಂದು ತೋರಿಸಿ ನಂತರ ಆತನ ಬಳಿ ಇದ್ದ ಮಾಲುಗಳನ್ನು

ಅಮಾನತ್ತು ಪಡಿಸಿಕೊಂಡು, ನಾನು ಪಂಚರಾಗಬೇಕೆಂದು ಕೋರಿಕೊಂಡೆವು ಎಂದರೆ ಸರಿಯಲ್ಲ. ನಂತರ ನಮ್ಮ ಸಮಕ್ಷಮ ಅಜಮಾಯಿಸಿ ಮಾಡಲಾಗಿ 1 ಏಷ್ಯನ್ ಪೇಂಟ್ ಡಬ್ಬದಲ್ಲಿ 15 ಸಾರಾಯಿ ಪ್ಯಾಕೆಟ್ ಗಳಿದ್ದು ಅವುಗಳ ಮೇಲೆ ಚಾಮುಂಡಿ ಡಿಸ್ಟಿಲರಿಸ್ ಪ್ರೈವೇಟ್ ಲಿಮಿಟೆಡ್ ಎಂದು ಬರೆದಿತ್ತು ಎಂದರೆ ಸರಿಯಲ್ಲ. ಕನ್ನಡದಲ್ಲಿ ಹುಲಿಯೂರು ಬನ್ನೂರು ಹೋಬಳಿ, ಟಿ. ಎನ್. ಪುರ ತಾಲ್ಲೂಕು, ಮೈಸೂರು ಎಂದು ಬರೆದಿತ್ತು, ಕೆಳಭಾಗದಲ್ಲಿ 100 ಎ ಎಲ್, 35 ಯು ಟಿ ಎಂದು ಬರೆದಿತ್ತು ಎಂದರೆ ಸರಿಯಲ್ಲ. ಎಲ್ಲಾ ಪ್ಯಾಕೆಟ್ ಗಳಲ್ಲೂ ಹಾಗೇ ನಮೂದಿಸಿತ್ತು ಎಂದರೆ ಸರಿಯಲ್ಲ. ಅವುಗಳಲ್ಲಿ ಎರಡು ಪ್ಯಾಕೆಟ್ ಗಳನ್ನು ಸ್ಯಾಂಪಲ್ ತೆಗೆದುಕೊಂಡು ಬಿಳಿ ಬಟ್ಟೆಯಿಂದ ಸುತ್ತಿ, ಚೀಲದಲ್ಲಿ ಹಾಕಿ ಎಸ್ ಎಂಬ ಅಕ್ಷರದಿಂದ ಸೀಲು ಹಾಕಿದರು ಎಂದರೆ ಸರಿಯಲ್ಲ. ಆರೋಪಿಯ ಬಳಿ ಇದ್ದ 325 ರೂ ಹಣ ಮತ್ತು ಸಾರಾಯಿ ಪ್ಯಾಕೆಟ್ ಮತ್ತು ಪೇಂಟ್ ಡಬ್ಬವನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಮಾಡಿದರು ಎಂದರೆ ಸರಿಯಲ್ಲ. ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿಯ ಜೊತೆ ರಾಜಿ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಅವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಇಲ್ಲ.</u>

<u>ಮರುವಿಚಾರಣೆ ಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**